■ ಸಸಿತೋಟ

ಈಕೆ ಶತಮಾನ ಕಂಡ ಅಜ್ಜಿ. 102 ವರ್ಷ ವಯಸ್ಸಿನಲ್ಲೂ ಜಿಗಿಯುವಾಸೆ. ಆಸ್ಟ್ರೇಲಿಯಾದ ಈ ಹಿರಿಯಜ್ಜಿ ಐರೀನ್ ಒ'ಶಿಯಾ 14 ಸಾವಿರ ಅಡಿ (4300 ಮೀಟರ್) ಎತ್ತರದಿಂದ 'ಸ್ಕೈಡೈವ್' ಮಾಡಿ 'ಐರನ್ ಲೇಡಿ' ಎನಿಸಿಕೊಂಡಿದ್ದಾಳೆ. ನೂರನೇ ಹುಟ್ಟುಹಬ್ಬದಲ್ಲೂ ಇದೇ ರೀತಿ ಜಿಗಿದಿದ್ದ ಈ ಧೀರ ವೃದ್ಧೆ ಸದ್ಯ ದಾಖಲೆ ಪುಸ್ತಕದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದಾಳಂತೆ.



ಜರ್ಮನಿಯಲ್ಲಿ ಇತ್ತೀಚೆಗೆ ಸಾಫ್ ಆಗಿದ್ದ ರಸ್ತೆಯೊಂದು ಚಾಕೊಲೇಟ್ ಬಳಿದುಕೊಂಡು ಪರಿಮಳ ಬೀರುತ್ತಿತ್ತು. ಸಮೀಪದಲ್ಲಿದ್ದ ಚಾಕೊಲೇಟ್ ಕಾರ್ಖಾನೆಯ ಟ್ಯಾಂಕ್‌ನಲ್ಲಿದ್ದ ದ್ರವ ಚಾಕೊಲೇಟ್ ತುಂಬಿ ತುಳುಕಿದ್ದೇ ಇದಕ್ಕೆ ಕಾರಣವಂತೆ. ನಮ್ಮಲ್ಲಿ ಡಾಂಬರು ಬಳಿಯುವುದೇ ಅಡ್ಡಾದಿಡ್ಡಿ. ಆದರೆ ಅಲ್ಲಿ ಚಾಕೊಲೇಟ್ ಕೂಡಾ ರಸ್ತೆಯ ಮೇಲೆ ಹೇಗೆ ಶಿಸ್ತಾಗಿ ಹರಿದು ಬಂದಿದೆ.



ನೈಜೀರಿಯಾದ ಅಧ್ಯಕ್ಷ ಮುಹಮ್ಮದು ಬುಹಾರಿಗೆ ಬಂದ ಪೇಚು ಯಾರಿಗೂ ಬರಬಾರದು ಬಿಡಿ. ತಾನು ಸತ್ತಿಲ್ಲ ಎಂದು ಪದೇ ಪದೇ ಸ್ಪಷ್ಟನೆ ನೀಡುತ್ತಿದ್ದಾರಂತೆ. ಅಧ್ಯಕ್ಷರು ಸತ್ತಿದ್ದು, ಅವರ ಜಾಗದಲ್ಲಿ ಅವರ ತದ್ರೂಪಿಯನ್ನು ತಂದು ಕೂರಿಸಲಾಗಿದೆ ಎಂಬ ಗಾಳಿಸುದ್ದಿ ಸಾಮಾಜಿಕ ಜಾಲತಾಣದಲ್ಲಿ ಹಬ್ಬಿರುವುದೇ ಇದಕ್ಕೆ ಕಾರಣವಂತೆ. ಕಲ್ಪಿತ ತದ್ರೂಪಿಗೆ ಜುಬ್ರಿಲ್ ಎಂಬ ಹೆಸರನ್ನೂ ನೀಡಿದ್ದಾರಂತೆ. ಮಸಾಲೆಭರಿತ ಸಿನಿಮಾಗೆ ರೆಡಿ ಚಿತ್ರಕಥೆ!

ಅಮೆರಿಕಾದ ಮಿಯಾಮಿಯಲ್ಲಿ ಲಿಯೊ ಎಂಬಾತ ಉಬರ್ ಈಟ್ಸ್‌ನಿಂದ ಊಟದ ಪಾರ್ಸೆಲ್‌ಗೆ ಬೇಡಿಕೆ ಸಲ್ಲಿಸಿದ್ದನಂತೆ. ಪಾರ್ಸೆಲ್ ಏನೋ ಬಂತು. ಹಸಿದಿದ್ದ ಲಿಯೊ ಲಗುಬಗೆಯಿಂದ ಡಬ್ಬಿ ತೆರೆದು ಕೈ ಹಾಕಿದರೆ ಕೈಗೆ ಸಿಕ್ಕಿದ್ದು ಕೊಳಕಾದ ಅಂಡರ್‌ವೇರ್. ಅದೂ ಮಲದ ಕಲೆಗಳಿದ್ದವಂತೆ. ಸದ್ಯ ಹಣ ವಾಪಸ್ ಪಡೆದಿರುವ ಲಿಯೊ ಅಂಡರ್‌ವೇರ್‌ಗೆ ಆಹಾರ ಎಂಬ ಅರ್ಥ ಇದೆಯೇನೋ ಎಂದು ನಿಘಂಟಿನಲ್ಲಿ ಹುಡುಕಾಡುತ್ತಿರಬಹುದು.



ಚೀನಾದಲ್ಲಿ ಆಹಾರ ತ್ಯಾಜ್ಯದ ಪ್ರಮಾಣ ಮಿತಿ ಮೀರುತ್ತಿದೆ. ಜನ ತಿನ್ನುವುದಕ್ಕಿಂತ ಜಾಸ್ತಿ ಚೆಲ್ಲಾಡುತ್ತಿದ್ದಾರಂತೆ. ಆ ತ್ಯಾಜ್ಯವನ್ನು ಜಿರಳೆಗೆ ತಿನ್ನಿಸುವ ಹೊಸ ಐಡಿಯಾ ಅಲ್ಲಿ ಕೆಲವರ ತಲೆಯಲ್ಲಿ ಬಂದಿದೆ. ಜಿರಳೆಗಳನ್ನು ಕೂಡಿ ಹಾಕಿ ತಿನ್ನಿಸಿ ಅವುಗಳನ್ನು ಹಂದಿಗೆ ತಿನ್ನಿಸುತ್ತಾರಂತೆ. ಹಂದಿ ಮಾಂಸ ಹೋಗುವುದು ಯಾರ ಹೊಟ್ಟೆಗೆ? ಔಷಧ ಕಂಪೆನಿಗಳು ಅವುಗಳ ರಸ ಹಿಂಡಿ ಔಷಧಕ್ಕೆ ಬಳಸುತ್ತಿವೆಯಂತೆ. ಅಂತೂ ನೇರವಾಗಿ ಜಿರಳೆ ತಿಂದು 'ನೀನೇನು ಚೈನೀಸ್?' ಎಂದು ಗೇಲಿ ಮಾಡಿಸಿಕೊಳ್ಳುವ ಬದಲು ಈ ಉಪಾಯ!



ಚೀನಾದಲ್ಲಿ ಮೆಣಸಿನಕಾಯಿ ತಿನ್ನುವ ಸ್ಪರ್ಧೆಯಲ್ಲಿ ಯುವತಿಯೊಬ್ಬಳು ಪಾಲ್ಗೊಂಡಿದ್ದು ಹೀಗೆ. ಆದರೆ ಸ್ಪರ್ಧಿಗಳು ಗೆಲ್ಲುತ್ತಾರೋ, ಸೋಲುತ್ತಾರೋ ಮುಖ್ಯವಲ್ಲವಂತೆ. ಕೆಲವು ಹೊಟೇಲ್‌ಗಳು ಗ್ರಾಹಕರಿಗೆ ಈ ರೀತಿಯ ಮನರಂಜನೆ ಒದಗಿಸುತ್ತಿದ್ದಾರಂತೆ. ಇದು ನಿಜವಾದ ಮಸಾಲೆ.